# IN THE COURT OF THE ADDL. SENIOR CIVIL JUDGE & JMFC., GUBBI

# **OS -176/2022**

Witness present and duly sworn on : 31-07-2026

Further Cross Examination: by Counsel for Defendant no.6 :

1 ನೇ ವಾದಿ ರುದ್ರಯ್ಯರವರ ತಂದೆ ಬೋಚಯ್ಯರವರಿಗೆ ಶಾರದಮ್ಮ ಎಂಬ ಹೆಣ್ಣು ಮಗಳು ಇದ್ದಾರೆ ಎಂದರೆ ಸರಿ . ಸದರಿ ವಿಚಾರ ನನಗೆ ಗೊತ್ತಿದೆ ಎಂದರೆ ಸರಿ . ಸದರಿ ಶಾರದಮ್ಮ ರವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ . ವೀರಬದ್ರಯ್ಯರವರಿಗೆ 4 ಜನ ಹೆಣ್ಣು ಮಕ್ಕಳು ಎಂದರೆ ಸರಿ . ವೀರಬದ್ರಯ್ಯರವರ ಹೆಣ್ಣು ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ .1958 ವಿಬಾಗದಲ್ಲಿ ಬಂದ ಆಸ್ತಿಗಳು ನನ್ನ ತಂದೆ ಬಾಗಕ್ಕೆ ಬಂದ ಆಸ್ತಿಗಳು ಎಂದರೆ ದಾವಾ ಆಸ್ತಿಗಳನ್ನು ಹೊರತುಪಡಿಸಿ ಉಳಿದ ಆಸ್ತಿಗಳು ಬಂದಿರುತ್ತದೆ. ದಾವಾ ಆಸ್ತಿಯ ನನ್ನ ತಂದೆಗೆ ಬಂದಿರಲಿಲ್ಲ ಎಂದರೆ ಸದರಿ ಆಸ್ತಿಯು ವಿಬಾಗ ಆಗಿರಲಿಲ್ಲ ಮತ್ತು ನನ್ನ ತಾತನ ಹೆಸರಿನಲ್ಲಿ ಇದೆ. 1 ನೇ ವಾದಿ ದಾವೆ ಸಲ್ಲಿಸಿದಾಗ ನನಗೆ ಸದರಿ ವಿಚಾರ ಗೊತ್ತಿತ್ತು ಎಂದರೆ ಸರಿಯಲ್ಲ. ನನಗೆ ಸದರಿ ವಿಚಾರ ಗೊತ್ತಿದ್ದ ಕಾರಣ ನಾನು ಅವರನ್ನು ಅವರಿಗೆ ಹೇಳಿ ನನ್ನನ್ನು ಪ್ರತಿವಾದಿಯಾಗಿ ಮಾಡಿಸಿಕೊಂಡಿದ್ದೆನು ಎಂದರೆ ಸರಿಯಲ್ಲ. 1 ನೇ ವಾದಿ ಸಲ್ಲಿಸಿರುವ ಸಾಕ್ಷಿ ಪ್ರಮಾಣಪತ್ರವನ್ನು ನಾನು ತಿಳಿದುಕೊಂಡಿದ್ದೇನೆ. ಅವರು ಲಿಂಗೇಗೌಡರವರಿಗೆ ಇಬ್ಬರು ಮಕ್ಕಳು ಎಂದು ಬರೆಸಿರುವ ವಿಚಾರವನ್ನು ನಾನು ತಿಳಿದುಕೊಂಡಿದ್ದೇನೆ. ಸಾಕ್ಷಿ ಮುಂದುವರೆದು ಉಳಿದವರು ದಾವೆಯಲ್ಲಿ ಸೇರಿಕೊಂಡಿರುತ್ತಾರೆ. ಲಿಂಗೇಗೌಡರವರ ಇತರೆ ಮಕ್ಕಳು ಈ ದಾವೆಯಲ್ಲಿ ಸೇರಿಲ್ಲ ಮತ್ತು ಅವರಿಗೆ ದಾವೆಯ ವಿಚಾರ ಗೊತ್ತಿಲ್ಲ ಎಂದರೆ ಸರಿಯಲ್ಲ.

ನನ್ನ ತಾತ ಲಿಂಗೇಗೌಡರವರ 10 ಜನ ಹೆಣ್ಣು ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿಲ್ಲ. ನಾನು ಈ ದಾವೆಯಲ್ಲಿ ವಾದಿಯಾಗಿ ಸೇರ್ಪಡೆಗೊಂಡಾಗ ನನಗೆ ಲಿಂಗೇಗೌಡರವರ 10 ಜನ ಹೆಣ್ಣುಮಕ್ಕಳ ಮಾಹಿತಿ ಇತ್ತು ಎಂದರೆ ಸರಿ . ನಾನು ಈ ದಾವೆಯಲ್ಲಿ ವಾದಿಯಾಗಿ ಸೇರ್ಪಡೆಗೊಂಡಾಗ ಅವರನ್ನು ಈ ದಾವೆಯಲ್ಲಿ ಸೇರಿಸಿಲ್ಲಎಂದರೆ ಸರಿ . 1 ನೇ ವಾದಿ ಮತ್ತು ಅವರ ಅಣ್ಣ ತಮ್ಮಂದಿರು ದಿಃ 03-03-1983 ರಂದು ಅವರ ತಂದೆಯ ಬಾಗಕ್ಕೆ ಬಂದಿದ ಆಸ್ತಿಗಳನ್ನು ವಿಬಾಗ ಮಾಡಿಕೊಂಡಿದ್ದಾರೆ ಎಂದರೆ ದಾವಾ ಆಸ್ತಿಯನ್ನು ಹೊರತುಪಡಿಸಿ

ಮಾಡಿಸಿಕೊಂಡಿದ್ದಾರೆ . ಸದರಿ ಪಾರಿಕತ್ ನ್ನು ನಾನು ನೋಡಿದ್ದೇನೆ. 1958 ರಲ್ಲಿ 1 ನೇ ವಾದಿಯ ತಂದೆಗೆ ಬಂದ ಆಸ್ತಿಯನ್ನು 1983 ರಲ್ಲಿ ವಿಬಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ . ದಾವಾ ಆಸ್ತಿಯು 1 ನೇ ವಾದಿಯ ತಂದೆಯ ಬಾಗಕ್ಕೆ ಬರದೇ ಇದ್ದ ಕಾರಣ 1983 ವಿಬಾಗದಲ್ಲಿ 1 ನೇ ವಾದಿ ವತ್ತು ಅವರ ಸಹೋದರರು ಬಾಗ ಮಾಡಿಕೊಂಡಿಲ್ಲ ಎಂದರೆ ಸರಿ .

ದಿಃ 12-01-2019 ರಂದು ವಿಬಾಗದಲ್ಲಿ ಬಂದಿದ್ದ ಸರ್ವೆನಂ 77/2 ರಲ್ಲಿ 14 ಗುಂಟೆ ಜಮೀನನ್ನು 1 ನೇವಾದಿ ರುದ್ರಯ್ಯ ಮತ್ತು ಅವರ ಹೆಂಡತಿ ಮತ್ತು ಮಕ್ಕಳು 6 ನೇ ಪ್ರತಿವಾದಿ ಅಂದರೆ ನನ್ನ ಅಣ್ಣ ಗಂಗಾದರಯ್ಯರರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ . ದಿಃ01-01-2010 ರಂದು ಸರ್ವೆ ನಂ 77/2 ರಲ್ಲಿ 14 ಗುಂಟೆ ಜಮೀನನ್ನು ರಾಜಣ್ಣ ಮತ್ತು ಗಿರೀಶ್ ರವರು 6 ನೇ ಪ್ರತಿವಾದಿ ಗೆ ಮಾರಾಟ ಮಾಡಿದ್ದಾರೆ ಎಂದರೆ ಇರಬಹುದು. 1 ನೇ ವಾದಿ ರುದ್ರಯ್ಯ ಮತ್ತು ರಾಜಣ್ಣ ಅಣ್ಣ ತಮ್ಮಂದಿರು ಎಂದರೆ ಸರಿ . ಅವರಿಬ್ಬರು ಅಣ್ಣತಮ್ಮಂದಿರು ಆಗಿರುವ ಕಾರಣ ತಲಾ 14 ಗುಂಟೆ ಜಮೀನು ಬಂದಿತು ಎಂದರೆ ಇರಬಹುದು. ದಿಃ 23-02-2016 ರಂದು ಸರ್ವೆ ನಂ 77/4 ರಲ್ಲಿ 1 ಎಕರೆ 2 ಗುಂಟೆ ಜಮೀನನ್ನು 1 ನೇ ವಾದಿ ರುದ್ರಯ್ಯ ಮತ್ತು ಅವರ ಹೆಂಡತಿ ಮತ್ತು ಮಕ್ಕಳು ಮತ್ತು ಶಿವಮ್ಮ ಮತ್ತು ಅವರ ಮಕ್ಕಳು, ರಾಜಣ್ಣ ಮತತ್ತು ಗಿರೀಶ್ ರವರು 6 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ .ದಿಃ 14-02-2023 ರಂದು 3 ನೇ ಪ್ರತಿವಾದಿ ಮಂಜುನಾಥ ಮತ್ತು ಅವರ ಮಕ್ಕಳು ಸರ್ವೆ ನಂ 84/2 ಮತ್ತು 7 ರಲ್ಲಿ 26 ಮತ್ತು 12 ಗುಂಟೆ ಜಮೀನನ್ನು 6 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ದಾಖಲೆಯನ್ನು ಸೃಷ್ಟಿಸಿಸುತ್ತಾರೆ. ಸದರಿ ಮಾರಾಟದ ವಿಚಾರ ನನಗೆ ಗೊತ್ತಿದೆ ಎಂದರೆ ನಂತರದಲ್ಲಿ ತಿಳಿಯಿತು.

(Further cross examination deferred at the request of counsel for the defendant No.6 )

(Typed to my dictation in open court)

R.O.I & A.C.

sd/-

Addl. Senior Civil Judge and
JMFC., Gubbi